Form No.4 (Civil) Deposition Sheets (R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ 11 ಚಾ.ಸಾ 20

| | | |
|---|---|---|
| ಹೆಸರು | : | ಈರಣ್ಣ |
| ತಂದೆಯ ಹೆಸರು | : | ಸಿದ್ದಣ್ಣ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ | : | ಯಾದಗಿರಿ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 09-04-2026
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು 2016 ರಿಂದ 2023 ರವರೆಗೆ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 14.02.2018 ರಂದು ಸಾಯಂಕಾಲ 5.00 ಗಂಟೆ ಸುಮಾರು ನಾನು ಠಾಣಾಧಿಕಾರಿ ಆಗಿದ್ದಾಗ ಚಾಸಾ-1 ರವರು ಹಾಜರಾಗಿ ಲಿಖಿತ ದೂರನ್ನು ಕೊಟ್ಟಿದ್ದು ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು. ನಿ.ಪಿ.1 ರ ಆಧಾರದ ಮೇಲೆ ಠಾಣಾ ಗುನ್ನೆ ಸಂಖ್ಯೆ 28/2018 ಭಾರತ ದಂಡ ಸಂಹಿತೆ ಕಲಂ 504, 304 ಸಹವಾಚಕ 34 ರಡಿಯಲ್ಲಿ ಪುರಕರಣನ್ನು ನೊಂದಾಯಿಸಿಕೊಂಡಿದ್ದೇನೆ. ಪ್ರ.ಪ್ರ. ವರದಿಯನ್ನು **ನಿ.ಪಿ.16** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.16(ಎ)** ಎಂದು ಗುರುತಿಸಲಾಯಿತು. ಪ್ರ.ಪ್ರ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಅದರ ಪ್ರತಿಯನ್ನು

ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ ಕೇಸಿನ ಮುಂದಿನ ಕಡತವನ್ನು ಚಾಸಾ-21 ರವರಿಗೆ ಕೊಟ್ಟಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಜಿ.ಬಿ.ಆರ್. ವಕೀಲರಿಂದ

3. ಚಾಸಾ-1 ರವರಿಗೆ ಬರೆಯಲು ಓದಲು ಬರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ 12.02.2018 ರಂದು ಸದರಿ ಘಟನೆ ನಡೆದಿರುತ್ತದೆ ಎಂದರೆ ಸಾಕ್ಷಿದಾರರು ನಿ.ಪಿ.1 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.1 ಅನ್ನು ದಿಃ 14.02.2018 ರಂದು ಕೊಟ್ಟಿರುತ್ತಾರೆ ಎಂದರೆ ಸರಿ. ನಿ.ಪಿ.1 ಅನ್ನು ಎರಡು ದಿನ ವಿಳಂಬವಾಗಿ ಕೊಡಲು ಕಾರಣ ನನಗೆ ಹೇಳಿರುವುದಿಲ್ಲ. ನಿ.ಪಿ.1 ರ ಪ್ರಕಾರ ಗುರುಮಠಕಲ್, ಯಾದಗಿರಿ, ರಾಯಚೂರು, ಬಳ್ಳಾರಿ ಅಲ್ಲಿಂದ ಬೆಂಗಳೂರಿಗೆ ಈ ಎಲ್ಲ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಟ್ಟ ನಂತರ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಮರುವಿಚಾರಣೆಃ-ಇಲ್ಲ

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ 12 ಚಾ.ಸಾ 15

| | | |
|---|---|---|
| ಹೆಸರು | : | ತಿಮ್ಮರಾಜು |
| ತಂದೆಯ ಹೆಸರು | : | ಸಾಬಣ್ಣ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಖಾಸರಿ ಕಂಪ್ಯೂಟರ ಕೆಲಸ |
| ವಾಸ | : | ಕಂದಕೂರು |

ಪ್ರಮಾಣ ವಚನ ಭೋಧಿಸಿದ ದಿನಾಂಕ: 09-04-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ದಿಃ 15.02.2018 ರಂದು ಸೈದಾಪೂರ ಸರಕಾರಿ ಆಸ್ಪತ್ರೆಯಲ್ಲಿ ಹಾಗೂ ಬಳಿಚಕ್ರ ಗ್ರಾಮದ ಗುನ್ನೆ ಸ್ಥಳದಲ್ಲಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಸಾಕ್ಷಿದಾರರಿಗೆ ಈಗ ನಿ.ಪಿ.8 ರಿಂದ 11 ಅನ್ನು ಭಾವಚಿತ್ರಗಳನ್ನು ತೆಗೆದಿದ್ದು ತೋರಿಸಲಾಗಿದ್ದು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿ.ಪಿ.8 ರಿಂದ 11 ಎಂದು ಗುರುತಿಸಲಾಗಿದೆ. ನಿ.ಪಿ.3 ರಿಂದ 6 ಅನ್ನು ಗುನ್ನೆ ಸ್ಥಳದಲ್ಲಿ ತೆಗೆದ ಭಾವಚಿತ್ರಗಳನ್ನು ಆಗಿರುತ್ತವೆ ಎಂದು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ಹೋಂ ಗಾರ್ಡ ಆಗಿ ಕೆಲಸ ಮಾಡುತ್ತಿದ್ದೇನು. ಸೈದಾಪೂರ ಪೊಲೀಸ ಠಾಣೆಯಲ್ಲಿ ಹ್ಯಾಂಡಿ ಕ್ಯಾಮರದ ನಿ.ಪಿ.8 ರಿಂದ 11 ಮತ್ತು ನಿಪಿ.3 ರಿಂದ 6 ಅನ್ನು ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಯಾದಗಿರಿಯ ಖಾಸಗಿ ಲ್ಯಾಬನಲ್ಲಿ ಭಾವಚಿತ್ರಗಳನ್ನು ತೆಗೆಸಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಹೆಚ್.ಜಿ.ವಕೀಲರಿಂದ

2. ಶವಗಾರ ಕೋಣೆ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಆ ಶವದ ಮೇಲೆ ಬಳಿ ಬಣ್ಣದ ಬಟ್ಟೆ ಸುತ್ತಿದ್ದರು. ಆ ಶವಗಾರ ಕೋಣೆಯಲ್ಲಿ ಒಂದೇ ಶವ ಇತ್ತು. ಆ ಹ್ಯಾಂಡಿ ಕ್ಯಾಮರ ಯಾವ ಕಂಪನಿದ್ದು ಎಂದು ನನಗೆ ನೆನಪಿರುವುದಿಲ್ಲ. ಗುನ್ನೆ ಸ್ಥಳದ ಪಂಚನಾಮೆ ಭಾವಚಿತ್ರವನ್ನು ತೆಗೆದಾಗ ಯಾವ ವಾರ ಇತ್ತು ಎಂದು ನನಗೆ ನೆನಪಿರುವುದಿಲ್ಲ. ಹ್ಯಾಂಡಿ ಕ್ಯಾಮರದಲ್ಲಿ ಭಾವಚಿತ್ರವನ್ನು ತೆಗೆಯಲು ನನಗೆ ತರಬೇತಿ ಇರುವುದಿಲ್ಲ. ನಾನು, ಚಾಸಾ-1 ರವರಿಗೆ ಸಹಾಯವಾಗಿಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.